ಹಾಗಂತ ಬಸವನ ಪೂಜೆಯನ್ನು ಅದ್ದೂರಿಯಾಗಿ ಮಾಡುತ್ತಿರಲಿಲ್ಲ. ಈ ವರ್ಷವೂ ಸರಳವಾಗಿ ಬಸವಜಯಂತಿಯನ್ನು ಆಚರಿಸಿ ‘ಪ್ರಸಾದಕ್ಕೆ ನಡೆಯಿರಿ’ ಎಂದು ಮುಗಿಸಿಬಿಟ್ಟ. ಪ್ರತಿವರ್ಷ ಬಸವ ಜಯಂತಿಯ ದಿನ ಪೂಜೆ ಸರಳವಾಗಿ ನಡೆದು, ತಾತನ ಹಿತನುಡಿಯ ವಚನಗಳನ್ನು ಒಂದು ತಾಸಾದರು ಕೇಳುತ್ತಿದ್ದರು. ಈ ವರ್ಷ ಸಂಕ್ಷಿಪ್ತವಾಯಿತೆಂದು ಗೊಣಗಿದರು. ಕಲ್ಯಾಣಪುರದ ಹಿರಿಯ ಜೀವಿ ಮಹಂತಮ್ಮ ಬಸವನಿಗೆ ನಮಸ್ಕಾರ ಮಾಡಿ ‘ತಾತನ ಮನ್ಸು ಯಾಕೋ ಇವತ್ತು ಶಾಂತವಾಗಿಲ್ಲ’ ಎಂದುಕೊಳ್ಳುತ್ತ ಪ್ರಸಾದಕ್ಕೆ ನಡೆದಳು.

ಈ ಮನೆಯ ದೊಡ್ಡ ಜೀವ ಶಿವಸಂಗಪ್ಪನ ಜತೆ ಶಿವಮಲ್ಲಯ್ಯ ತಾತ ಬಸವ ಪೂಜೆ ಮುಗಿಸಿ ತಮ್ಮ ವಾಸದ ಕೊಠಡಿಗೆ ಬಂದು, ಮರದ ಆರಾಮ ಕುರ್ಚಿಯ ಮ್ಯಾಲೆ ಕುಂತರು. ಈ ಸರಹದ್ದಿನಲ್ಲಿದ್ದ ನದಿ ತೀರದ ಅಕ್ಕಪಕ್ಕ ಕಲ್ಯಾಣಪುರ, ಬಸವಪುರ, ಸಿದ್ರಾಮಪುರ, ಮಹಾಂತಪುರ, ಮಾದೇವಿಪುರ ಮುಂತಾದ ಹತ್ತಾರು ಹಳ್ಳಿಗಳು ಬಸವ ಮತ್ತು ವಚನ ತತ್ತ್ವಗಳ ಪ್ರಭಾವದಲ್ಲಿದ್ದು ಬಾಳ್ವೆಯನ್ನು ಕಟ್ಟಿಕೊಂಡಿದ್ದವು. ಈ ಕಾಲದಲ್ಲಿ ಇದಕ್ಕೆ ಕಾರಣ ಜಂಗಮನಾಗಿ ಶಿವಮಲ್ಲಯ್ಯ ತಾತನು ಈ ಸರಹದ್ದಿನ ಮಂದಿಗೆ ದೈವವಾಗಿ ಪರಿಣಮಿಸಿದ್ದ. ಹಾಗಂತ ತಾತ ಎಂದೂ ಮಂದಿಯಿಂದ ಎತ್ತರದಲ್ಲಿರಲಿಲ್ಲ. ನಡೆದಾಡುವ ದೈವವಾಗಿದ್ದ!

ಶಿವಸಂಗಪ್ಪ ಯಜಮಾನ ಮತ್ತು ಶಿವಮಲ್ಲಯ್ಯ ತಾತ ಒಂದೇ ಓರಿಗೆಯವರು. ಅವರಿಬ್ಬರಿಗೆ ಈಗ ವಯಸ್ಸು ಎಪ್ಪತ್ತು ದಾಟಿತ್ತು. ಗುರು-ಶಿಷ್ಯರಾಗಿ, ಗೆಳೆತನದಿಂದಾಗಿ ಬದುಕಿನಲ್ಲಿ ಜತೆಯಾಗಿ ನಡೆದು ಬಂದಿದ್ದರು. ಶಿವಸಂಗಪ್ಪನಿಗೆ ಶಿವಮಲ್ಲಯ್ಯ ತಾತನೇ ದೈವ.

‘ಅಪ್ಪ, ತಾತ, ಪ್ರಸಾದಕ್ಕೆ ಬರ್ತಿರೇನು? ಇಲ್ಲಂದ್ರ ಇಲ್ಲಿಗೆ ತಂದು ಕೊಡ್ಲೇನು?’ ಎಂದು ಕೇಳಿದಳು ಮಗಳು ಮಾದೇವಿ ಬಂದು.

‘ಅಲ್ಲಿಗೆ ಬರ್ತೀವವ್ವ’ ಎಂದು ಶಿವಸಂಗಪ್ಪ ಎದ್ದೇ ಬಿಟ್ಟ. ಆದ್ರೆ ಶಿವಮಲ್ಲಯ್ಯ ತಾತನ ಮನ್ಸು ಇಲ್ಲಿರಲಿಲ್ಲ. ಅದಕಂಡು ಚಿಂತೆಯಾಯ್ತು. ಸಲುಪು ಹೊತ್ತು ನಿಂತುಕೊಂಡ. ದೊಡ್ಡಮನ್ಯಾಗ ಒಳಗೂ-ಹೊರಗೂ ಮಂದಿಯ ಮಾತಿನ ಗದ್ದಲ ತಟಗು ಜಾಸ್ತಿಯಿತ್ತು. ತಾತ ಪಟ್ಟನೆ ಕುರ್ಚಿಯಿಂದ ಎದ್ದು ‘ನಡಿಯಪ್ಪ’ ಅಂದ. ಇಬ್ಬರು ಮನೆಯಲ್ಲೇ ಇದ್ದ ‘ಪ್ರಸಾದ ನಿಲಯ’ದಲ್ಲಿ ಕುಂತು ನಾಸ್ಟ ಮಾಡಿ, ಅಲ್ಲಿದ್ದ ಮನೆಮಕ್ಕಳು, ಮೊಮ್ಮೊಕ್ಕಳನ್ನು ಮಾತಾಡಿಸಿಕೊಂಡು ಪಡಸಾಲೆಗೆ ಬಂದರು. ಅಲ್ಲಿಯೂ ಮನೆಮಂದಿ, ಊರ ಮಂದಿ, ಕೆಲಸದವರೆಲ್ಲ ಇಬ್ಬರು ಹಿರಿಯ ಜೀವಗಳನ್ನು ನೋಡಿ, ಅವಸರದಿಂದ ಬಂದು ಇಬ್ಬರ ಪಾದಗಳಿಗೆ ನಮಸ್ಕಾರ ಮಾಡತೊಡಗಿದರು. ಶಿವಸಂಗಪ್ಪ ‘ಈ ಜೀವಕ್ಕೆ ಸಣಮಾಡ್ರಿ! ನನಗ್ಯಾಕ ಮಾಡ್ತೀರಿ’ ಎಂದು ತಾತನ ಕಡೆ ನೋಡಿದ. ತಾತ ಬಿಗಿಯಿದ್ದಂತೆ ಕಂಡ. ಹಿರಿಮಗ ಶಿವಬಸವ ಬಂದು ‘ಅಪ್ಪ, ಎಲ್ಲರದ್ದೂ ನಾಸ್ಟ ಮುಗಿತು. ನೂರು ಮಂದಿ ಇದ್ದಾರ. ಮಧ್ಯಾಹ್ನದ ಊಟಕ್ಕ ಅಡಿಗೇನೂ ಸಜ್ಜಾಗ್ತದ. ಆದ್ರೆ ಬೀಗ್ರು ಬಂದಂಗ ಕಾಣದಿಲ್ಲ! ಹೊತ್ತು ಮೂಡಿ ನಾಲ್ಕು ತಾಸುಗಳಾದ್ವು’ ಎಂದು ಹೇಳುತ್ತಲೇ ತಾತನ ಕಡೆ ನೋಡಿದ. ಅಷ್ಟರಲ್ಲಿ ಎರಡನೇ ಮಗ ಶಿವಸಿದ್ಧರಾಮ ‘ಹೌದು ಬೀಗ್ರು ಬಂದಿದ್ರ ಕಾರ್ಯ ಮಾಡಿ ಮುಗಿಸಿ ಬಿಡ್ತಿದ್ವಿ’ ಎಂದ.

‘ಶಿವ, ನಮ್ಗ ಮೂಹೂರ್ತವಿಲ್ಲ. ಅವುರು ಬಂದ್ರೆ ಅದೇ ಶುಭಗಳಿಗೆ ಅಂತ ಮಾಡ್ತೀವಿ. ಚಿಂತಿ, ಗಡಬಿಡಿ ಮಾಡಬ್ಯಾಡ್ರೀ. ನಾಜೂಕಾಗಿ ಕಾರ್ಯ ಮಾಡಿ ಮುಗಸಬೇಕಾಗೈತೆ.’ ಅಂದದ್ದೇ ತಡ ಹಿರಿಯ ಮಕ್ಕಳಿಬ್ಬರು ಸೂಕ್ಷ್ಮ ಅರಿತು ‘ಆಯ್ತು ತಾತ. ನಿನಂದಂಗ ಆಗ್ಲಿ’ ಎಂದು ತಮ್ಮ ತಮ್ಮ ಕೆಲಸಕ್ಕೆ ಹೋದರು.

ಶಿವಸಂಗಪ್ಪ, ಶಿವಮಲ್ಲಯ್ಯ ತಾತ ಇಬ್ಬರು ಬಿಳಿ ಅಂಗಿ, ಬಿಳಿ ಪಂಚೆ ಹಾಕಿಕೊಂಡಿದ್ದರು. ಹೆಗಲಮ್ಯಾಲೆ ತಾತನಿಗೊಂದು ತಿಳಿಕೆಂಪು ಬಣ್ಣದ ಸೆಲ್ಯವಿತ್ತು. ಅಲ್ಲಿಂದ ತಮ್ಮ ದೊಡ್ಡ ಕೊಠಡಿಗೆ ಬಂದರು. ಅಲ್ಲಿ ಎರಡು ಪಲ್ಲಂಗಗಳು, ಎರಡು ಮರದ ಖುರ್ಚಿಗಳಿದ್ದವು. ಕುರ್ಚಿಗಳ ಮ್ಯಾಲೆ ಕುಂತರು. ಇಬ್ಬರಿಗೂ ಸಮಾಧಾನ ಇರಲಿಲ್ಲ. ಅನುಮಾನ ಸುಳಿಯುತ್ತಿತ್ತು. ಆಗ ಶಿವಸಂಗಪ್ಪ,

‘ತಾತ, ಬೀಗ್ರು ಇಷ್ಟತ್ತಿಗೆ ಬರಬೇಕಾಗಿತ್ತಲ್ಲ?’ ಎಂದು ಕೇಳಿದ.

‘ಬಸವಣ್ಣನ ಪೂಜೆ ಮುಗಿಸಿ, ಅದರ ಬೆನ್ನಹಿಂದಿನ ಕಾರ್ಯ ಮುಗಿಸಬೇಕಂತ ಎಣಿಸಿದ್ದೆ. ಹೊತ್ತು ಮೂಡಿ ನಾಕ ಐದು ತಾಸಿನ ಒಳಗ ಬರ್ತೀವಿ ಅಂದಿದ್ರು. ಪರ್ವಾಗಿಲ್ಲ. ಎಲ್ಲರನ್ನ ಕಟಿಗೊಂಡು ಬರದ್ಕ ತಡ ಆಗ್ತದ. ಬರ್ತಾರ... ಅಂದಂಗ ನೀನು ಪಲ್ಲಂಗದಾಗ ಅಡ್ಡಾಗು. ನಾನು ನೋಡ್ಕಂತೀನಿ’ ಎಂದ.



